ತೆಗೆದುಕೊಂಡಿರುವುದಿಲ್ಲ. ಸದರಿ ಅಗತ್ಯ ಕಾಮಗಾರಿ ಮುಗಿಸಿದ ಕೂಡಲೇ ಕಟ್ಟಡದ ಉಪಯೋಗ ಜನರಿಗೆ ದೊರಕಲು ಕಟ್ಟಡದ ಸ್ವಾಧೀನ ಪಡೆದು ಆಸ್ಪತ್ರೆ ಪ್ರಾರಂಭಿಸಲು ಸಂಬಂದಿಸಿದವರಿಗೆ ಸೂಚಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ

352(712) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವವು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸರಕಾರಿ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ? ಎಷ್ಟು ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ;

ಆ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೆ?

ಇ) ದಕ್ಷಿಣ ಕನ್ನಡ ಜಿಲ್ಲೆ ಉಪನಿರ್ದೇಶಕರ ಕಛೇರಿಗೆ ಸ್ವಂತ ಕಟ್ಟಡ ಒದಗಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಹೆ.ಚ್.ಜಿ.ಗೋವಿಂದೆಗೌಡ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು.

ಅ) ಸ್ವಂತ ಕಟ್ಟಡವಿರುವ ಶಾಲೆಗಳ ಸಂಖ್ಯೆ - 177 ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳ - 12 ಸಂಖ್ಯೆ

ಆ) ಇದೆ.

ಇ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಸರ್ಕಾರಿ ಪಾಲಿಟೆಕ್ನಿಕ್ ಆರೆಕಾಲಿಕ ಉಪನ್ಯಾಸಕರ ಕುರಿತು

353(615) ಶ್ರೀ ಕರಡಿ ಸಂಗಣ್ಣ (ಕೊಪ್ಪಳ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರವರೆ

ಅ) ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಆರೆಕಾಲಿಕ ಉಪನ್ಯಾಸಕರಾಗಿ ಎಷ್ಟು ಜನ ಸೇವೆ ಸಲ್ಲಿಸುತ್ತಿದ್ದಾರೆ (ಜಿಲ್ಲಾವಾರು ವಿವರ ನೀಡುವುದು)

ಆ) ಸರ್ಕಾರದ ಪದವಿ ಕಾಲೇಜ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಆರೆಕಾಲಿಕ ಉಪನ್ಯಾಸಕರಿಗೆ ವೇತನ ನಿಗದಿ ಪಡಿಸಿದಂತೆ ಈ ಆರೆಕಾಲಿಕ ಉಪನ್ಯಾಸಕರಿಗೆ ವೇತನ ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಇ) ಪದವಿ ಕಾಲೇಜ್ ಅರೆಕಾಲಿಕ ಉಪನ್ಯಾಸಕರಿಗೆ ಖಾಯಂ ಮಾಡುವಾಗ ಪಾಲಿಟೆಕ್ನಿಕ್‌ನಲ್ಲಿ ಇರುವ ಅರೆಕಾಲಿಕ ಉಪನ್ಯಾಸಕರಿಗೆ ಖಾಯಂ ಮಾಡಲು ಸಾಧ್ಯವೇ?

ಶ್ರೀ ಬಿ. ಸೋಮಶೇಖರ್ ಉನ್ನತ ಶಿಕ್ಷಣ ಸಚಿವರು:

ಅ) ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ 623 ಜನ ಸೇವೆ ಸಲ್ಲಿಸುತ್ತಿದ್ದಾರೆ.

	ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ	
1)	ಬೆಂಗಳೂರು (ನಗರ)	136
2)	ಬೆಂಗಳೂರು (ಗ್ರಾಮಾಣ)	2
3)	ಧಾರವಾಡ	22
4)	ಶಿವಮೊಗ್ಗ	34
5)	ತುಮಕೂರು	2
6)	ದಕ್ಷಿಣ ಕನ್ನಡ	81
7)	ಕೋಲಾರ	28
8)	ಕೊಡಗು	5
9)	ಹಾಸನ	88
10)	ಚಿತ್ರದುರ್ಗ	11
11)	ಗುಲ್ಬರ್ಗಾ	48
12)	ಬಳ್ಳಾರಿ	25
13)	ರಾಯಚೂರು	89
14)	ಬಿಜಾಪುರ	80
15)	ಮೈಸೂರು	18
16)	ಕಾರವಾರ	18
17)	ಮಂಡ್ಯ	18
18)	ಚಿಕ್ಕಮಗಳೂರು	8
19)	ಬೆಳಗಾವಿ	19
20)	ಬೀದರ್	41
		623

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) - ಅದೇ -

ವೃತಿಪರ ಶಿಕ್ಷಣ ಕೋರ್ಸ್‌ಗಳು

358(101) ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಮತ್ತು ವೃತಿ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಎಷ್ಟು ವೃತ್ತಿಪರ ಶಿಕ್ಷಣ ಕೋರ್ಸುಗಳನ್ನು (ಜೆಒಡಿಸಿ) ಯಾವ ಯಾವ ಶಾಲೆಗಳಿಗೆ ಮಂಜೂರು ಮಾಡಲಾಗಿದೆ (ವಿವರ ನೀಡುವುದು).

ಅ) ಮಂಜೂರಾದ ಕೋರ್ಸುಗಳ ಸಂಖ್ಯೆ - 1427 1996-97ನೇ ಸಾಲಿನಲ್ಲಿ ಹಾಲಿ ನಡೆಯುತ್ತಿರುವ ಕೋರ್ಸುಗಳ ಸಂಖ್ಯೆ - 1363 ವೃತ್ತಿ ಶಿಕ್ಷಣ ಕೋರ್ಸುಗಳನ್ನು 12 ಹಂತದಲ್ಲಿ ಪಿ.ಯು. ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳು ಈ ಬಗೆಯ ಶಾಲೆಗಳಿಗೆ ಮಂಜೂರು ಮಾಡಲಾಗಿದೆ. ಇವುಗಳ ವಿವರ ಈ ಕೆಳಕಂಡಂತಿದೆ:

	ಸರ್ಕಾರಿ ಸಂಸ್ಥೆಗಳು	ಕೋರ್ಸುಗಳ ಸಂಖ್ಯೆ	ಸರ್ಕಾರೇತರ ಸಂಸ್ಥೆಗಳು	ಕೋರ್ಸುಗಳ ಸಂಖ್ಯೆ
ಎ)1 ಪಿಯು ಕಾಲೇಜುಗಳು	250	412	497	859
2. ಪಾಲಿಟೆಕ್ನಿಕ್‌ಗಳು	9	9	52	83
ಒಟ್ಟು	259	421	549	942

ಒಟ್ಟು ಕೋರ್ಸುಗಳು - 1363

ಬಿ) ಈಗಾಗಲೇ ಮಂಜೂರಾಗಿ ನಡೆಸುತ್ತಿದ್ದ ಕೋರ್ಸ್‌ಗಳು ಸಧ್ಯದಲ್ಲಿ ಮುಚ್ಚಿರುವ ವಿವರ

1. ಪಿಯು ಕಾಲೇಜುಗಳಲ್ಲಿ	9	9	32	41
2. ಪಾಲಿ ಟಿಕ್ನಿಕ್‌ಗಳಲ್ಲಿ	4	4	7	10
ಒಟ್ಟು	13	13	39	51
ಒಟ್ಟುಕೋರ್ಸುಗಳು			-64	